

ಹುಲಿ, ಮನದೊಳಗೆ ತನ್ನ ಯೋಚನೆ ಫಲಿಸಿತು ಎಂದು ಆನಂದಪಟ್ಟು ಅಲ್ಲಿಂದ ನಿರ್ಗಮಿಸಿತು. ಅದಾಗಿ ಕೆಲ ನಿಮಿಷಗಳ ನಂತರ ಕಾ ಕಾ... ಕಾ... ಎನ್ನುತ್ತ ಅಲ್ಲಿಗೆ ಹಾರಿ ಬಂದ ಕಾಗೆ, ನರಿ ಮತ್ತು ಜಿಂಕೆ ಎದುರು ನಿಂತು 'ಮೋಸ.. ಮೋಸ.. ಹಳ್ಳಕ್ಕೆ ಬಿದ್ದಿರಿ ನೀವು' ಎಂದು ಕೂಗಿಕೊಂಡಾಗ ಕೊಂಚ ಗಲಿಬಿಲಿಗೊಂಡ ನರಿ–ಜಿಂಕೆ, 'ಏನು ಮೋಸ. ಯಾರು ಹಳ್ಳಕ್ಕೆ ಬಿದ್ದರು. ಸರಿಯಾಗಿ ಬಿಡಿಸಿ ಹೇಳು' ಎಂದಾಗ ಆ ಕಾಗೆ ಅಂದು ಹುಲಿ ಮಾಡಿದ ಶಪಥದ ಸನ್ನಿವೇಶ ವಿವರಿಸಿತು. 'ಜೋಪಾನ ಆ ಹುಲಿ ಏಕಕಾಲಕ್ಕೆ ನಿಮ್ಮಿಬ್ಬರನ್ನೂ ಕಬಳಿಸಲು ಮಾಡಿದ ಸಂಚು ಇದು' ಎಂದು ಹೇಳಿತು. ಆಗ ಅವೆರಡೂ ಗಾಬರಿಗೊಂಡು ಮತ್ತೆ 'ನಾವು ಹೇಗೆ ಬಚಾವ್ ಆಗಬೇಕು' ಎಂದು ಕೇಳಿದಾಗ ಕಾಗೆ 'ನೀವು ಆ ಹುಲಿಯ ಬಳಿ ಹೋಗುವುದಕ್ಕೂ ಮುನ್ನ ನಾನು ಒಂದಿಷ್ಟು ವಿಚಿತ್ರವಾದ ಹಣ್ಣು ತಂದು ಕೊಡುವೆ. ನೀವು ಏನೂ ಗೊತ್ತಿಲ್ಲದವರಂತೆ ಅಲ್ಲಿಗೆ ಹೋಗಿ, ಆ ಹುಲಿ ನಿಮಗೆ ಹಣ್ಣು ತಿನ್ನಲು ಹೇಳುವ ಮುನ್ನ, ನಾವು ಎಲ್ಲಿಗೇ ಹೋದರೂ ಈ ಹಣ್ಣುಗಳನ್ನು ನಮ್ಮನ್ನು ಆಹ್ವಾನಿಸಿದವರಿಗೆ ಕೊಟ್ಟು ನಂತರ ಅವರು ಕೊಡುವ ಆಹಾರ ಸೇವಿಸುವುದು ಪದ್ಧತಿ ಎಂದು ಹೇಳಿ..ಆಗ ಹುಲಿ ನಿಮ್ಮಿಂದ ನಾನು ತಂದು ಕೊಡುವ ಹಣ್ಣು ತಿಂದ ಮರು ಘಳಿಗೆಯಲ್ಲೇ ಕನಿಷ್ಠ ಐದು ಗಂಟೆ ಕಾಲ ಪ್ರಜ್ಞೆ ತಪ್ಪಿ ಬೀಳುತ್ತದೆ. ಆಗ ಅಲ್ಲಿಂದ ತಪ್ಪಿಸಿಕೊಂಡು ಬೇರೆಡೆ ಓಡಿ ಹೋಗಿ' ಎಂದು ಸಲಹೆ ನೀಡಿತು.

ಮಾರನೆಯ ದಿನ ನರಿ ಮತ್ತು ಜಿಂಕೆ ಹೊರಟು ನಿಂತ ಸರಿಯಾದ ಸಮಯಕ್ಕೆ ಕಾಗೆ ತಾನು ತಿಳಿಸಿದಂತೆ ಒಂದಿಷ್ಟು ಹಣ್ಣು ತಂದು ಕೊಟ್ಟು 'ನಾನು ಹೇಳಿದಂತೆ ಮಾಡಿ. ಅದಕ್ಕೆ ಅನುಮಾನ ಬರದಂತೆ ನೋಡಿಕೊಳ್ಳಿ' ಎಂದು ಎಚ್ಚರಿಸಿತು. 'ಸರಿ' ಎಂದ, ಜಿಂಕೆ ಮತ್ತು ನರಿ ಆ ಹುಲಿಯ ಗವಿಯ ಬಳಿ ಬಂದವು. ಇವುಗಳನ್ನೇ ಎದುರು ನೋಡುತ್ತಿದ್ದ ಹುಲಿ ಮೇಲ್ನೋಟಕ್ಕೆ ಸಭ್ಯನಂತೆ ನಗುತ್ತ ಅವುಗಳನ್ನೂ ಬರಮಾಡಿಕೊಂಡಿತು. ಆದರೆ ಮನದಲ್ಲಿ 'ಆಹ್ಹಾ, ಅಂತೂ ನನ್ನ ಪ್ಲಾನ್ ಯಶಸ್ವಿ ಆಗುವ ಕಾಲ ಬಂದಿತು ಏಕಕಾಲಕ್ಕೆ ಎರಡು ಬೇಟೆ' ಎಂದು ಮನದಲ್ಲಿ ಮಂಡಿಗೆ ತಿನ್ನತೊಡಗಿತು. ನರಿ ಮತ್ತು ಜಿಂಕೆಗಳಿಗೆ ತನ್ನ ಗವಿಯ ಮುಂದಿದ್ದ ಕೆಲವು ಹಣ್ಣಿನ ಬುಟ್ಟಿ ತೋರಿಸುತ್ತ 'ಬನ್ನಿ.. ಬನ್ನಿ ಜೊತೆಯಾಗಿ ಹಣ್ಣು ಸವಿಯೋಣ' ಎಂದು ಜೇನಿನಂತಹ ಮಾತು ನುಡಿದಾಗ ನರಿ 'ಒಂದು ನಿಮಿಷ ತಾಳು ಹುಲಿಯಣ್ಣಾ! ನಾವಿಬ್ಬರೂ ಎಲ್ಲೇ ಅತಿಥಿಗಳಾಗಿ ಹೋದರೂ ಈ ಹಣ್ಣುಗಳನ್ನು ಅವರಿಗೆ ಕೊಟ್ಟು ಅವರು ಅದನ್ನು ತಿಂದಾದ ನಂತರ ಸಹಭೋಜನ ಮಾಡುವುದು ಪದ್ಧತಿ. ಹೀಗಾಗಿ ಮೊದಲು ಈ ಹಣ್ಣನ್ನು ಸೇವಿಸು' ಎಂದು ಕಾಗೆ ಕೊಟ್ಟ ಹಣ್ಣನ್ನು ಅದಕ್ಕೆ ಕೊಟ್ಟಿತು. ಆಗ ಹುಲಿ 'ಅಷ್ಟೇ ತಾನೆ? ಕೊಡು ಇಲ್ಲಿ ಎಂದು ಎಲ್ಲ ಹಣ್ಣನ್ನು ಪಡೆದು ಗಬಕ್ ಎಂದು ಒಂದೇ ಏಟಿಗೆ ತಿಂದು ಮುಗಿಸಿತು. ಬುದ್ಧಿವಂತ ನರಿ ಅದಕ್ಕೆ 'ತಾಳು ನಿನ್ನ ಹಣ್ಣಿನ ಬುಟ್ಟಿ ತರುವೆ ಎಲ್ಲಿದೆ ಹೇಳು' ಎಂದಾಗ ಅರೆ ಪ್ರಜ್ಞೆ ಹೊಂದಿದ ಆ ಹುಲಿ ತೊದಲುತ್ತ 'ಅಗೋ ಅಲ್ಲಿ' ಎಂದು ಹೇಳುತ್ತಲೇ ದಪ್ ಎಂದು ಪ್ರಜ್ಞೆ ತಪ್ಪಿ ಕೆಳಗೆ ಬಿದ್ದು ಬಿಟ್ಟಿತು. ಈ ದೃಶ್ಯವನ್ನು ಮೇಲಿನಿಂದ ಹಾರಾಡುತ್ತಲೆ ನೋಡುತ್ತಿದ್ದ ಕಾಗೆ ಕೆಳಕ್ಕೆ ಬಂದು ನರಿ ಮತ್ತು ಜಿಂಕೆಯೊಂದಿಗೆ ಹುಲಿ ಇಟ್ಟಿದ್ದ ಹಣ್ಣನ್ನು ಖುಷಿಯಿಂದ ತಿಂದು ಅಲ್ಲಿಂದ ಪಲಾಯನ ಮಾಡಿದವು.



# ನಮ್ಮ ಪಾಪು

■ **ವೀರೇಶ ಬ. ಕುರಿ, ಸೋಲಾಪೂರ**
ಕಲೆ: ಸಂತೋಷ್ ಸಸಿಹಿತ್ಲು

ಬೆಳಗು ಜಾವ ನಾಲ್ಕು ಗಂಟೆಗೆ
ಎದ್ದು ಬಿಡುವ ಬೇಗ
ಬಯಸಿದ್ದನು ಕೊಡದಿದ್ದರೆ
ತೆಗೆದುಬಿಡುವ ರಾಗ!

ಕೈಗೆ ಸಿಗದೆ ಓಡುವನು
ಅಂಬೆಗಾಲನಿಕ್ಕುತ
ಅಕ್ಕನೆನಲು ಕುಣಿಯುವನು
ಮನದಿ ಹರುಷವುಕ್ಕುತ

ಬಾಚಿಯಂತ ಮೂರು ಹಲ್ಲು
ಅಯ್ಯೊ ಎಂಥ ಚೂಪು
ಕಚ್ಚಿದೊಡನೆ ನೋವ ಜ್ವಾಲೆ
ಮೂಡಿಸುವನು ಛಾಪು

ವಾಹನಗಳ ಸದ್ದು ಕೇಳಿ
ಹೊರಳಿಸುವನು ಕತ್ತು
ಹೆಗಲ ಮೇಲೆ ಕೂಡಿಸಲು
ಬರುವವು ಕೂದಲು ಕಿತ್ತು

ಏನೇ ಸಿಗಲಿ ಎಲ್ಲ ಬಾಯ್ಗೆ
ತೂರಿ ಬಿಡುವ ಚೋರ
ಜೇನಿನಂತಹ ಜೊಲ್ಲು ಸುರಿಸಿ
ಗಾನಗೈವ ಪೋರ

ಬಾಯಿ ತೆರೆದು ನಕ್ಕರಲ್ಲೆ
ಚೆಂಬೆಳಕಿನ ಬಲೆ
ಎತ್ತಿಕೊಂಡವರೆದೆಯಲ್ಲಿ
ಹರುಷದ ಅಲೆ

ನಮ್ಮ ಪಾಪು ನಮ್ಮ ಭಾಗ್ಯ
ಎಂಥ ಚೆಲುವನು
ಮನೆ ಮನಗಳ ಬೆಳಗುತಲಿ
ತರುವ ಗೆಲುವನು

